For More Job News Visit:kpscvaani.com

ಕರ್ನಾಟಕ ಸರ್ಕಾರ

ಸಂಖ್ಯೆ:ಆಪಸಂ/ಸಿಬ್ಬಂದಿ–3(2)/ವಿವ–69/2020–21

ಆಯುಕ್ತರವರ ಕಛೇರಿ
ಪಶುಪಾಲನ ಮತ್ತು ಪಶುವೈದ್ಯಕೀಯ ಸೇವಾ
ಇಲಾಖೆ ಪಶುಪಾಲನ ಭವನ, ಬಳ್ಳಾರಿ ರಸ್ತೆ,
ಹೆಬ್ಬಾಳ, ಬೆಂಗಳೂರು–24 ದಿನಾಂಕ:14–06–2021

ಮಾರ್ಪಾಡು ಅಧಿಸೂಚನೆ

ವಿಷಯ :– ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆಯಡಿ ಅನುಚ್ಛೇದ-371(ಜೆ)ರಂತೆ ಕಲ್ಯಾಣ–ಕರ್ನಾಟಕ ಪ್ರದೇಶದ ಸ್ಥಳೀಯ ವೃಂದದ 32 ಪಶುವೈದ್ಯಕೀಯ ಪರೀಕ್ಷಕರ ಹಾಗೂ 83 ಪಶುವೈದ್ಯಕೀಯ ಸಹಾಯಕರ ಹುದ್ದೆಗಳನ್ನು ತುಂಬಲು ಆನ್‌ಲೈನ್ ಮೂಲಕ ಅರ್ಜಿಗಳನ್ನು ಆಹ್ವಾನಿಸುವ ಕುರಿತು.

ಉಲ್ಲೇಖ 1. ಕರ್ನಾಟಕ ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವೆಗಳ (ಕಲ್ಯಾಣ-ಕರ್ನಾಟಕ ಪ್ರಾದೇಶಿಕ ಸ್ಥಳೀಯ ವೃಂದಗಳ ಪಶುವೈದ್ಯಕೀಯ ಪರೀಕ್ಷಕರು ಹಾಗೂ ಪಶುವೈದ್ಯಕೀಯ ಸಹಾಯಕರುಗಳ ನೇಮಕಾತಿ(ವಿಶೇಷ) ನಿಯಮಗಳು-2019ರ ಅಧಿಸೂಚನೆ ಸಂಖ್ಯೆ: ಪಸಂಮಿಲ/26/ ಪಅವಿ/ 2018, ದಿನಾಂಕ:11-02-2020.

2. ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆಯಡಿ ಅನುಚ್ಛೇದ-371(ಜೆ)ರಂತೆ ಕಲ್ಯಾಣ–ಕರ್ನಾಟಕ ಪ್ರದೇಶದ ಸ್ಥಳೀಯ ವೃಂದದ 32 ಪಶುವೈದ್ಯಕೀಯ ಪರೀಕ್ಷಕರ ಹಾಗೂ 83 ಪಶುವೈದ್ಯಕೀಯ ಸಹಾಯಕರ ಹುದ್ದೆಗಳನ್ನು ತುಂಬಲು ಈಗಾಗಲೇ ಹೊರಡಿಸಿರುವ ಅಧಿಸೂಚನೆ ಸಂಖ್ಯೆ:ಆಪಸಂ/ಸಿಬ್ಬಂದಿ–3(2)/ವಿವ–69/2020–21,ದಿನಾಂಕ:26–06–2020.

*****

ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆಯಡಿ ಅನುಚ್ಛೇದ 371(ಜೆ)ರ ಕಲ್ಯಾಣ-ಕರ್ನಾಟಕ ಪ್ರದೇಶದ ಸ್ಥಳೀಯ ವೃಂದದಡಿ 32 ಪಶುವೈದ್ಯಕೀಯ ಪರೀಕ್ಷಕರ ಹುದ್ದೆಗಳನ್ನು ಹಾಗೂ 83 ಪಶುವೈದ್ಯಕೀಯ ಸಹಾಯಕರ ಹುದ್ದೆಗಳನ್ನು ಉಲ್ಲೇಖ (1)ರ ನಿಯಮಗಳಿಗೆ ಒಳಪಟ್ಟು, ಆನ್‌ಲೈನ್ ಮೂಲಕ ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲು ಉಲ್ಲೇಖ(2)ರಂತೆ ಹೊರಡಿಸಲಾದ ಅಧಿಸೂಚನೆಯಲ್ಲಿ ಈ ಕೆಳಕಂಡಂತೆ ಮಾರ್ಪಾಡು ಮಾಡಿದ್ದು ಅದರಂತೆ ತಿದ್ದಿ ಓದಿಕೊಳ್ಳತಕ್ಕದ್ದು.

ದಿನಾಂಕ:26-06-2020ರ ಅಧಿಸೂಚನೆಯ ಕ್ರಮ ಸಂಖ್ಯೆ:	ದಿನಾಂಕ:26-06-2020ರ ಅಧಿಸೂಚನೆಯಲ್ಲಿರುವುದು	ಪ್ರಸ್ತುತ ಮಾಡಲಾದ ಮಾರ್ಪಾಡು
ಕ್ರಮ ಸಂಖ್ಯೆ 02) ನೇಮಕಾತಿ ವಿಧಾನ(2)	ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ:14-08-2020ರ (ಸಂಜೆ 5:30ರವರೆಗೆ)	ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ:16-08-2021ರ (ಸಂಜೆ 5:30ರವರೆಗೆ)
ಕ್ರಮ ಸಂಖ್ಯೆ 02) ನೇಮಕಾತಿ ವಿಧಾನ(3) ರಲ್ಲಿ ಹಾಗೂ ಕ್ರಮ ಸಂಖ್ಯೆ 04) ಅರ್ಜಿ ಶುಲ್ಕ (2)ರಲ್ಲಿ	ಶುಲ್ಕವನ್ನು ಪಾವತಿಸಲು ಕೊನೆಯ ದಿನಾಂಕ:19-08-2020 (ಅಂಚೆ ಕಚೇರಿ ಕರ್ತವ್ಯದ ವೇಳೆ ವರೆಗೆ)	ಶುಲ್ಕವನ್ನು ಪಾವತಿಸಲು ಕೊನೆಯ ದಿನಾಂಕ:20-08-2021 (ಅಂಚೆ ಕಚೇರಿ ಕರ್ತವ್ಯದ ವೇಳೆ ವರೆಗೆ)

---2

Sambhavane

For More Job News Visit:kpscvaani.com

ಕ್ರಮ ಸಂಖ್ಯೆ(6) ಶೈಕ್ಷಣಿಕ ವಿದ್ಯಾರ್ಹತೆಯ I (1)	ಅರ್ಜಿ ಸಲ್ಲಿಸಲು ನಿಗದಿಪಡಿಸಿದ ಕೊನೆಯ ದಿನಾಂಕ ಅಂದರೆ ದಿನಾಂಕ:14-08-2020 ರೊಳಗಾಗಿ ಅಭ್ಯರ್ಥಿಯು ಕಾನೂನಿನ ಮೂಲಕ ಸ್ಥಾಪಿಸಲಾದ ವಿಶ್ವವಿದ್ಯಾಲಯದಲ್ಲಿ, ಬಿ.ಎಸ್ಸಿ ಪದವಿಯಲ್ಲಿ ಪ್ರಾಣಿಶಾಸ್ತ್ರವನ್ನು ಐಚ್ಛಿಕ ವಿಷಯವಾಗಿ ಹೊಂದಿರುವ ಪದವಿಯನ್ನು ಪಡೆದಿರಬೇಕು.	ಅರ್ಜಿ ಸಲ್ಲಿಸಲು ನಿಗದಿಪಡಿಸಿದ ಕೊನೆಯ ದಿನಾಂಕ ಅಂದರೆ ದಿನಾಂಕ:16-08-2021 ರೊಳಗಾಗಿ ಅಭ್ಯರ್ಥಿಯು ಕಾನೂನಿನ ಮೂಲಕ ಸ್ಥಾಪಿಸಲಾದ ವಿಶ್ವವಿದ್ಯಾಲಯದಲ್ಲಿ, ಬಿ.ಎಸ್ಸಿ ಪದವಿಯಲ್ಲಿ ಪ್ರಾಣಿಶಾಸ್ತ್ರವನ್ನು ಐಚ್ಛಿಕ ವಿಷಯವಾಗಿ ಹೊಂದಿರುವ ಪದವಿಯನ್ನು ಪಡೆದಿರಬೇಕು.
ಕ್ರಮ ಸಂಖ್ಯೆ(6) ಶೈಕ್ಷಣಿಕ ವಿದ್ಯಾರ್ಹತೆಯ I (2)	ಅರ್ಜಿ ಸಲ್ಲಿಸಲು ನಿಗದಿಪಡಿಸಿದ ಕೊನೆಯ ದಿನಾಂಕ ಅಂದರೆ ದಿನಾಂಕ:14-08-2020 ರೊಳಗಾಗಿ ಅಭ್ಯರ್ಥಿಯು ಕಾನೂನಿನ ಮೂಲಕ ಸ್ಥಾಪಿಸಲಾದ ವಿಶ್ವವಿದ್ಯಾಲಯದಲ್ಲಿ, ಅಗತ್ಯ ಖಾಲಿ ಹುದ್ದೆಗಳಿಗಾಗಿ ಬಿ.ಎಸ್ಸಿ (ಪ್ರಾಣಿಶಾಸ್ತ್ರ) ಅಭ್ಯರ್ಥಿಗಳು ಲಭ್ಯವಿಲ್ಲದ ಸಂದರ್ಭದಲ್ಲಿ, ಯಾವುದೇ ವಿಜ್ಞಾನ ಪದವಿಯಲ್ಲಿ, ಪದವಿಯನ್ನು ಪಡೆದಿರುವ ಮತ್ತು ಪಿ.ಯು.ಸಿ.ಯಲ್ಲಿ ಐಚ್ಛಿಕ ವಿಷಯವನ್ನಾಗಿ ಜೀವಶಾಸ್ತ್ರವನ್ನು ಅಭ್ಯಸಿಸಿರಬೇಕು	ಅರ್ಜಿ ಸಲ್ಲಿಸಲು ನಿಗದಿಪಡಿಸಿದ ಕೊನೆಯ ದಿನಾಂಕ ಅಂದರೆ ದಿನಾಂಕ:16-08-2021 ರೊಳಗಾಗಿ ಅಭ್ಯರ್ಥಿಯು ಕಾನೂನಿನ ಮೂಲಕ ಸ್ಥಾಪಿಸಲಾದ ವಿಶ್ವವಿದ್ಯಾಲಯದಲ್ಲಿ, ಅಗತ್ಯ ಖಾಲಿ ಹುದ್ದೆಗಳಿಗಾಗಿ ಬಿ.ಎಸ್ಸಿ (ಪ್ರಾಣಿಶಾಸ್ತ್ರ) ಅಭ್ಯರ್ಥಿಗಳು ಲಭ್ಯವಿಲ್ಲದ ಸಂದರ್ಭದಲ್ಲಿ, ಯಾವುದೇ ವಿಜ್ಞಾನ ಪದವಿಯಲ್ಲಿ, ಪದವಿಯನ್ನು ಪಡೆದಿರುವ ಮತ್ತು ಪಿ.ಯು.ಸಿ.ಯಲ್ಲಿ ಐಚ್ಛಿಕ ವಿಷಯವನ್ನಾಗಿ ಜೀವಶಾಸ್ತ್ರವನ್ನು ಅಭ್ಯಸಿಸಿರಬೇಕು
ಕ್ರಮ ಸಂಖ್ಯೆ 6) ಶೈಕ್ಷಣಿಕ ವಿದ್ಯಾರ್ಹತೆಯ II (1)	ಅರ್ಜಿ ಸಲ್ಲಿಸಲು ನಿಗದಿಪಡಿಸಿದ ಕೊನೆಯ ದಿನಾಂಕ ಅಂದರೆ ದಿನಾಂಕ:14-08-2020 ರೊಳಗಾಗಿ ಅಭ್ಯರ್ಥಿಯು ಕಾನೂನಿನ ಮೂಲಕ ಸ್ಥಾಪಿಸಲಾದ ಕರ್ನಾಟಕ ಪಶುವೈದ್ಯಕೀಯ, ಪಶು ಮತ್ತು ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ ಅಥವಾ ಯಾವುದೇ ಇತರ ವಿಶ್ವ ವಿದ್ಯಾಯಲಯವು ನಡೆಸಲಾದ ಪಶು ಆರೋಗ್ಯ (ಪಶುಸಂಗೋಪನೆ) ಡಿಪ್ಲೊಮೊ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರಬೇಕು.	ಅರ್ಜಿ ಸಲ್ಲಿಸಲು ನಿಗದಿಪಡಿಸಿದ ಕೊನೆಯ ದಿನಾಂಕ ಅಂದರೆ ದಿನಾಂಕ:16-08-2021 ರೊಳಗಾಗಿ ಅಭ್ಯರ್ಥಿಯು ಕಾನೂನಿನ ಮೂಲಕ ಸ್ಥಾಪಿಸಲಾದ ಕರ್ನಾಟಕ ಪಶುವೈದ್ಯಕೀಯ, ಪಶು ಮತ್ತು ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ ಅಥವಾ ಯಾವುದೇ ಇತರ ವಿಶ್ವ ವಿದ್ಯಾಯಲಯವು ನಡೆಸಲಾದ ಪಶು ಆರೋಗ್ಯ (ಪಶುಸಂಗೋಪನೆ) ಡಿಪ್ಲೊಮೊ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರಬೇಕು.
ಕ್ರಮ ಸಂಖ್ಯೆ(6) ಶೈಕ್ಷಣಿಕ ವಿದ್ಯಾರ್ಹತೆಯ II (2)	ಅರ್ಜಿ ಸಲ್ಲಿಸಲು ನಿಗದಿಪಡಿಸಿದ ಕೊನೆಯ ದಿನಾಂಕ ಅಂದರೆ ದಿನಾಂಕ:14-08-2020 ರೊಳಗಾಗಿ ಅಭ್ಯರ್ಥಿಯು ನಿರ್ದೇಶಕರು, ವೃತ್ತಿ ಶಿಕ್ಷಣ (ಪದವಿ ಪೂರ್ವ ಶಿಕ್ಷಣ ಇಲಾಖೆ) ಕರ್ನಾಟಕ ಸರ್ಕಾರವು ನಡೆಸಲಾದ ಡೈರಿಗೆ ಸಂಬಂಧಿಸಿದ 02 ವರ್ಷಗಳ ಉದ್ಯೋಗ ಆಧಾರಿತ ಕೋರ್ಸ್‌ನಲ್ಲಿ ಉತ್ತೀರ್ಣರಾಗಿರಬೇಕು.	ಅರ್ಜಿ ಸಲ್ಲಿಸಲು ನಿಗದಿಪಡಿಸಿದ ಕೊನೆಯ ದಿನಾಂಕ ಅಂದರೆ ದಿನಾಂಕ:16-08-2021 ರೊಳಗಾಗಿ ಅಭ್ಯರ್ಥಿಯು ನಿರ್ದೇಶಕರು, ವೃತ್ತಿ ಶಿಕ್ಷಣ (ಪದವಿ ಪೂರ್ವ ಶಿಕ್ಷಣ ಇಲಾಖೆ) ಕರ್ನಾಟಕ ಸರ್ಕಾರವು ನಡೆಸಲಾದ ಡೈರಿಗೆ ಸಂಬಂಧಿಸಿದ 02 ವರ್ಷಗಳ ಉದ್ಯೋಗ ಆಧಾರಿತ ಕೋರ್ಸ್‌ನಲ್ಲಿ ಉತ್ತೀರ್ಣರಾಗಿರಬೇಕು.

--3

For More Job News Visit:kpscvaani.com

ಷರತ್ತುಗಳು:-

1. ಅಧಿಸೂಚನೆ ಸಂಖ್ಯೆ:ಆಪಸಂ/ಸಿಬ್ಬಂದಿ-3(2)/ವಿವ-69/2020-21,ದಿ:26-06-2020ರಂತೆ ದಿನಾಂಕ:01-07-2020 ರಿಂದ 07-07-2020ರವರೆಗೆ ಸಲ್ಲಿಸಲಾಗಿರುವ ಪರಿಪೂರ್ಣ ಮಾಹಿತಿ ಹಾಗೂ ಅರ್ಜಿ ಶುಲ್ಕವನ್ನು ಪಾವತಿಸಿರುವ ಅರ್ಜಿಗಳನ್ನು ಮಾತ್ರ ಪರಿಗಣಿಸಲಾಗುವುದು.
2. ಈ ಹಿಂದೆ ದಿನಾಂಕ:01-07-2020 ರಿಂದ 07-07-2020ರವರೆಗೆ **Online Recruitment System** ಮುಖಾಂತರ ನೇಮಕಾತಿಗಾಗಿ ಪರಿಪೂರ್ಣ ಅರ್ಜಿ ಸಲ್ಲಿಸಿರುವ ಅಭ್ಯರ್ಥಿಗಳು ಮತ್ತೊಮ್ಮೆ ಅರ್ಜಿ ಸಲ್ಲಿಸುವ ಅವಶ್ಯಕತೆ ಇರುವುದಿಲ್ಲ.
3. ಅಧಿಸೂಚನೆ ಸಂಖ್ಯೆ:ಆಪಸಂ/ಸಿಬ್ಬಂದಿ-3(2)/ವಿವ-69/2020-21, ದಿ:26-06-2020ರಂತೆ ಹುದ್ದೆಗಳ ವರ್ಗೀಕರಣ ಮುಂದುವರೆದಿರುತ್ತದೆ.
4. ಅಧಿಸೂಚನೆ ಸಂಖ್ಯೆ:ಆಪಸಂ/ಸಿಬ್ಬಂದಿ-3(2)/ವಿವ-69/2020-21, ದಿ:26-06-2020ರಲ್ಲಿ ವಿಧಿಸಲಾಗಿದ್ದ ಷರತ್ತುಗಳು ಮುಂದುವರೆಯುತ್ತದೆ.

ಜಂಟಿ ನಿರ್ದೇಶಕರು (ಆಡಳಿತ)
ಪಶುಪಾಲನೆ ಮತ್ತು ಪಶುವೈದ್ಯ ಸೇವಾ ಇಲಾಖೆ
ಹಾಗೂ ಪದನಿಮಿತ್ತ ಸದಸ್ಯ ಕಾರ್ಯದರ್ಶಿ
ಇಲಾಖಾ ಆಯ್ಕೆ ಸಮಿತಿ
ಬೆಂಗಳೂರು - 560024

ಆಯುಕ್ತರು
ಪಶುಪಾಲನೆ ಮತ್ತು ಪಶುವೈದ್ಯ ಸೇವಾ ಇಲಾಖೆ
ಹಾಗೂ ಪದನಿಮಿತ್ತ ಅಧ್ಯಕ್ಷರು, ಇಲಾಖಾ ಆಯ್ಕೆ ಸಮಿತಿ
ಬೆಂಗಳೂರು - 560024

Sambhavane